ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಗ್ರಾಮ ಪಂಚಾಯತ್‌ನಲ್ಲಿ ಬಿಲ್ ಕಲೆಕ್ಟರ್ ಹಾಗೂ ಗುಮಾಸ್ತರುಗಳ ಜೇಷ್ಟತಾ ಪಟ್ಟಿ ತಯಾರಿಸಲಾಗಿದೆಯೆ;

ಆ) ಹಾಗಿದ್ದಲ್ಲಿ ಗ್ರಾಮ ಪಂಚಾಯತ್ ಬಿಲ್ ಕಲೆಕ್ಟರ್ ಮತ್ತು ಗುಮಾಸ್ತರುಗಳನ್ನು ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-೨ ಹುದ್ದೆಗೆ ಬಡ್ತಿ ನೀಡಲು ಈವರೆಗೆ ಇಲಾಖೆ ಪರಿಗಣಿಸದೇ ಇರಲು ಕಾರಣವೇನು;

ಇ) ಖಾಲಿ ಇರುವ ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-೨ರ ಹುದ್ದೆಗೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ದ್ವಿತೀಯ ದರ್ಜೆ ಸಹಾಯಕರನ್ನು ನಿಯೋಜಿಸುವ ಮೂಲಕ ಭರ್ತಿ ಮಾಡುತ್ತಿರುವುದಕ್ಕೆ ಕಾರಣವೇನು?

ಶ್ರೀ ಎಂ.ವೈ.ಘೋರ್ಪಡೆ: (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹೌದು.

ಆ) ಗ್ರಾಮ ಪಂಚಾಯತ್ ಕಾರ್ಯದರ್ಶಿ ಹುದ್ದೆಗಳು ಜಿಲ್ಲಾ ಮಟ್ಟದ ಹುದ್ದೆಗಳಾಗಿದ್ದು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಶೇ.೩೦ ರಷ್ಟು ಗ್ರಾಮ ಪಂಚಾಯತ್ ಗ್ರೇಡ್-೨ ಕಾರ್ಯದರ್ಶಿ ಹುದ್ದೆಗಳನ್ನು ಬಿಲ್ ಕಲೆಕ್ಟರ್ ಮತ್ತು ಗುಮಾಸ್ತರುಗಳಿಂದ ತುಂಬಲು ಅವಕಾಶವಿರುತ್ತದೆ. ಮಂಡ್ಯ ಜಿಲ್ಲಾ ಪಂಚಾಯತ್‌ನಲ್ಲಿ ೩೭ ಗ್ರಾಮ ಪಂಚಾಯತ್ ನೌಕರರನ್ನು ಗ್ರಾಮ ಪಂಚಾಯತಿ ಗ್ರೇಡ್-೨ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲಾಗಿದೆ.

ಇ) ನೇರ ನೇಮಕಾತಿ ಮೂಲಕ ಗ್ರಾಮಪಂಚಾಯತಿ ಕಾರ್ಯದರ್ಶಿ ಗ್ರೇಡ್-೨ ಹುದ್ದೆಗೆ ಅಭ್ಯರ್ಥಿಗಳನ್ನು ಪಡೆಯುವಲ್ಲಿ ತೊಂದರೆಯಾಗಿರುವುದರಿಂದ ನೇರ ನೇಮಕಾತಿ ಹುದ್ದೆಗಳನ್ನು ಪ್ರಥಮವಾಗಿ ಅನುಕಂಪದ ಆಧಾರದ ಮೇಲೆ ಹಾಗೂ ಉಳಿದ ಹುದ್ದೆಗಳನ್ನು ಶಿಕ್ಷಣ ಇಲಾಖೆ ಮತ್ತು ಕೃಷಿ ಇಲಾಖೆಯಿಂದ ದ್ವಿತೀಯ ದರ್ಜೆ ಸಹಾಯಕರನ್ನು ನಿಯೋಜನೆಯ ಮೂಲಕ ಭರ್ತಿ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ. ಬಿಲ್ ಕಲೆಕ್ಟರ್ ಮುಂತಾದ ಪಂಚಾಯತಿ ನೌಕರರ ಆಯ್ಕೆಯಿಂದ ತುಂಬಲು ಕಾಯ್ದಿರಿಸಿರುವ ಹುದ್ದೆಗಳನ್ನು ನಿಯೋಜನೆಯ ಮೂಲಕ ತುಂಬಲಾಗುತ್ತಿಲ್ಲ.

ಮಂಡ್ಯ ಜಿಲ್ಲಾ ಪಂಚಾಯತ್‌ಗೆ ಇ.ಎ.ಎಸ್. ಅನ್ವಯ ಬಿಡುಗಡೆಯಾಗಿರುವ ಅನುದಾನ.

೧೩೭೨(೧೭೪೪)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಂಡ್ಯ ಜಿಲ್ಲಾ ಪಂಚಾಯತ್‌ಗೆ ೧೯೯೯-೨೦೦೦ ಮತ್ತು ೨೦೦೦-೨೦೦೧ನೇ ಸಾಲಿನಲ್ಲಿ ಕೇಂದ್ರ ಉದ್ಯೋಗ ಭರವಸೆ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನವೆಷ್ಟು?

ಆ. ಈ ಅನುದಾನದಿಂದ ಮಂಡ್ಯ ಜಿಲ್ಲೆಯಲ್ಲಿ ಕೈಗೊಂಡಿರುವ ಇ.ಎ.ಎಸ್ ಕಾಮಗಾರಿಯ ವಿವರಗಳೇನು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ. ಉದ್ಯೋಗ ಭರವಸೆ ಯೋಜನೆಯಡಿ ಮಂಡ್ಯ ಜಿಲ್ಲಾ ಪಂಚಾಯತ್‌ಗೆ ೧೯೯೯-೨೦೦೦ನೇ ಸಾಲಿನಲ್ಲಿ ರೂ. ೩೭೨.೩೯ ಲಕ್ಷ ಹಾಗೂ ೨೦೦೦-೦೧ನೇ ಸಾಲಿನಲ್ಲಿ ರೂ.೯೫.೩೬ ಲಕ್ಷ ಬಿಡುಗಡೆ ಮಾಡಲಾಗಿದೆ.

ಆ. ಕಾಮಗಾರಿ ವಿವರ

(ಲಕ್ಷ ರೂ.ಗಳಲ್ಲಿ)

ತೆಗೆದುಕೊಂಡ ಕಾಮಗಾರಿಗಳು	೧೯೯೯-೨೦೦೦ (ಸಂಖ್ಯೆಗಳಲ್ಲಿ)	ಖರ್ಚು	೨೦೦೦-೦೧ (ಸಂಖ್ಯೆಗಳಲ್ಲಿ)	ಖರ್ಚು
೧. ಅಂಗನವಾಡಿ ಕಟ್ಟಡಗಳು	೧೩೧	೫೯.೯೩೭	೭೯	೪೪.೬೪೩
೨. ಭೂಸಾರ ಸಂರಕ್ಷಣಾ (ನಾಲಾಬದು ಮತ್ತು ಚೆಕ್‌ಡ್ಯಾಂ)	೫೧	೨೯.೫೨೦	೩೮	೩೩.೦೬೦
೩. ಕೆರೆ ಹೂಳೆತ್ತುವುದು	೧೪	೧೩.೦೦೦	೫೦	೫೭.೦೦೦
೪. ರಸ್ತೆ ಅಭಿವೃದ್ಧಿ	೨೨	೫೯.೨೧೫	೧೦	೧೦.೦೦೦

೫. ಗ್ರಾಮೀಣ ರಸ್ತೆ ಅಭಿವೃದ್ಧಿ ಜಾಲ (ಪ್ರತಿ ತಾಲ್ಲೂಕಿಗೆ ರೂ. ೨೦.೦೦ ಲಕ್ಷದಂತೆ)	-	-	-	೧೪೦.೦೦೦
೬. ಅರಣ್ಯ (ಶಾಲಾ ಆವರಣದಲ್ಲಿ ತಂತಿಬೇಲಿ ಗಲ್ಲಿ ಚೆಕ್, ೨೪ ಕಿ.ಮೀ. ಪ್ಲಾಂಟೇಷನ್ ೧೫.೭೦೦ ಸೀಡ್ಲಿಂಗ್ಸ್)	೨೪	೯.೫೩೦	೧೬೯೭	೧೧.೭೪೯
		೧೭೧.೨೦೨		೩೦೦.೪೫೨